ಸಮ್ರಾ ಮುರಿದಿದ್ದರು. ಹರ್ಷ ಥಾಕರ್ ಜನಿಸಿದ್ದು ಗುಜರಾತ್ ರಾಜಧಾನಿ ಅಹಮದಾಬಾದ್‌ನಲ್ಲಿ. ವಿಶ್ವಕಪ್‌ನಲ್ಲಿ ಕೆನಡಾದ ಮೊದಲ ಪಂದ್ಯ ನಡೆದದ್ದೂ ಅಹಮದಾಬಾದ್‌ನಲ್ಲೇ. ಮೊಹಾಲಿಯಲ್ಲಿ ಜನಿಸಿದ ಜಸ್‌ಕರಣ್ ಕೆನಡಾ ತಂಡದ ವೇಗದ ಬೌಲಿಂಗ್ ಆಲ್‌ರೌಂಡರ್. ಅವರು ಕ್ರಿಕೆಟ್ ಆಡಲು ಆರಂಭಿಸಿದ್ದ ಭಾರತದಲ್ಲೇ. 2009ರಲ್ಲಿ ಹರಿಯಾಣ ಎದುರಿನ ಲಿಸ್ಟ್ ಎ ಪಂದ್ಯದಲ್ಲಿ ಪಂಜಾಬ್ ತಂಡದಲ್ಲಿ ಪದಾರ್ಪಣೆ ಮಾಡಿದ್ದ ಅವರು 3 ವಿಕೆಟ್ ಉರುಳಿಸಿದ್ದರು. ಮುಂದಿನ ವರ್ಷ ಲಿಸ್ಟ್ ಎ ಪಂದ್ಯದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಅನಂತರ ನೆಲೆ ಕಂಡದ್ದು ಕೆನಡಾದಲ್ಲಿ.

ಇಟಲಿ ತಂಡದಲ್ಲಿರುವ ಜಸ್‌ಪ್ರೀತ್ ಸಿಂಗ್ ಜನನ ಆದದ್ದು ಪಂಜಾಬ್‌ನ ಪಗ್ವಾರಾದಲ್ಲಿ. ನೆದರ್ಲೆಂಡ್ ತಂಡದಲ್ಲಿರುವ ಆರ್ಯನ್ ದತ್ತ 2016ರಿಂದ 3 ವರ್ಷ ಚಂಡೀಗಢದಲ್ಲೇ ಇದ್ದು ತರಬೇತಿ ಪಡೆದುಕೊಂಡಿದ್ದಾರೆ. ಮಹೇಂದ್ರ ಸಿಂಗ್ ದೋನಿ ಅವರನ್ನು ದೇವರಂತೆ ಕಾಣುವ ಅವರು ಆಫ್‌ಬ್ರೇಕ್ ಬೌಲಿಂಗ್ ಆಲ್‌ರೌಂಡರ್.

ಲುಧಿಯಾನದಲ್ಲಿ ಜನಿಸಿದ ಜತಿಂದರ್ ಸಿಂಗ್ ಕಳೆದ ವರ್ಷದಿಂದ ಒಮಾನ್ ತಂಡದ ನಾಯಕ. ಬಲಗೈ ಬ್ಯಾಟರ್ ಮತ್ತು ಆಫ್‌ಬ್ರೇಕ್ ಬೌಲಿಂಗ್ ಮಾಡಬಲ್ಲ ಸಮರ್ಥ. ಸಣ್ಣ ವಯಸ್ಸಿನಲ್ಲಿ ಪೋಷಕರ ಜೊತೆ ಒಮಾನ್‌ಗೆ ತೆರಳಿ 19 ವರ್ಷದೊಳಗಿನವರ ತಂಡದಲ್ಲಿ ಆಡಿದರು. ಜತಿ ಎಂದೇ ಕರೆಯಲಾಗುವ ಅವರು 2015ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ನಂತರ ಹಿಂದಿರುಗಿ ನೋಡಿಲ್ಲ. ಈಗ ತಂಡದ ನಾಯಕ ಆಗಿರುವ ಅವರಿಗೆ ಒಮಾನ್ ಪರವಾಗಿ ಅತಿ ಹೆಚ್ಚು ಪಂದ್ಯಗಳನ್ನು ಆಡಿದ ಆಟಗಾರ ಎಂಬ ಖ್ಯಾತಿಯೂ ಇದೆ. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಜತಿ ಈಗ ಆರಂಭಿಕ ಬ್ಯಾಟರ್. ಏಕದಿನ ಕ್ರಿಕೆಟ್‌ನಲ್ಲೂ ಟ್ವೆಂಟಿ–20ಯಲ್ಲೂ ದೇಶದ ಪರವಾಗಿ ಅತಿ

> ಭಾರತೀಯರಿಗೆ ಕ್ರಿಕೆಟ್ ಎಂದರೆ ಧರ್ಮದಂತೆ. ದೇಶದಲ್ಲಿ ಕ್ರಿಕೆಟಿಗರ ‘ತಿಂತಿಣಿಯ ಭಾರ’ವೂ ಅಧಿಕ. ವಿದೇಶಿ ತಂಡಗಳಲ್ಲೂ ಭಾರತೀಯರು ಈಗ ಪಾರಮ್ಯ ಮೆರೆಯುತ್ತಿದ್ದಾರೆ. ಭಾರತದಲ್ಲಿ ಜನಿಸಿದ ಅಥವಾ ಇಲ್ಲಿ ಕುಟುಂಬದ ಬೇರು ಹೊಂದಿರುವ ಕ್ರಿಕೆಟಿಗರನೇಕರು ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಬೇರೆ ಬೇರೆ ದೇಶಗಳನ್ನು ಪ್ರತಿನಿಧಿಸುತ್ತಿದ್ದಾರೆ. ನಾಯಕರಾಗಿಯೂ ತಂಡದ ಪ್ರಮುಖ ಆಟಗಾರರಾಗಿಯೂ ಮಿಂಚುತ್ತಿದ್ದಾರೆ.

ಹೆಚ್ಚು ರನ್ ಗಳಿಸಿದ ಆಟಗಾರ ಕೂಡ ಆಗಿದ್ದಾರೆ ಅವರು.

ಗುಜರಾತ್‌ನಲ್ಲಿ ಜನಿಸಿದ ಆಶಿಶ್ ಒಡೇದರ, ಕಾನ್ಪುರದ ವಿನಾಯಕ ಶುಕ್ಲ, ಮುಂಬೈನ ಬ್ಯಾಟಿಂಗ್ ಆಲ್‌ರೌಂಡರ್ ಕರಣ್ ಕಮಲಾಕರ್ ಸೋನಾವಾಲೆ, ಗುಜರಾತ್‌ನ ಸೌರಾಷ್ಟ್ರದ ಜಯ್ ಒಡೇದ್ರ, ಗುಜರಾತ್‌ನ ಮತ್ತೊಬ್ಬ ಆಟಗಾರ ಜಿತೇನ್ ರಮಾನಂದಿ ನವಸಾರಿ ಮುಂತಾದ ಎಲ್ಲರೂ ಒಮಾನ್ ಕ್ರಿಕೆಟ್‌ಗೆ ಬಲ ತುಂಬಲು ಪ್ರಯತ್ನಿಸುತ್ತಿದ್ದಾರೆ.

## ಸುಲ್ತಾನ್‌ಪುರದ ಮಹಾರಾಜ

ಬ್ಯಾಟಿಂಗ್‌ನಲ್ಲೂ ಮಿಂಚಬಲ್ಲ ಎಡಗೈ ಸ್ಪಿನ್ನರ್ ದಕ್ಷಿಣ ಆಫ್ರಿಕಾದ ಕೇಶವ್ ಆತ್ಮಾನಂದ್ ಮಹಾರಾಜ್ ದಕ್ಷಿಣ ಆಫ್ರಿಕಾ ತಂಡದ ಅವಿಭಾಜ್ಯ ಅಂಗ. ಯುಎಇ ತಂಡದ ಅಗ್ರ ಕ್ರಮಾಂಕದ ಆಟಗಾರ ಅಲಿಶಾನ್ ಶರಫು ಕೇರಳದ ಕಣ್ಣೂರಿನವರು. ವಿಶ್ವಕಪ್‌ನಲ್ಲಿ ತಂಡದ ಮೊದಲ ಪಂದ್ಯದಲ್ಲೇ ನ್ಯೂಜಿಲೆಂಡ್ ವಿರುದ್ಧ ಭರ್ಜರಿ ಬ್ಯಾಟಿಂಗ್ ಮಾಡಿ ಗಮನಸೆಳೆದಿದ್ದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಇಳಿದ ಅವರು 47 ಎಸೆತಗಳಲ್ಲಿ 55 ರನ್ ಗಳಿಸಿದ್ದರು. ಪಾಕಿಸ್ತಾನದಲ್ಲಿ ಜನಿಸಿದ ನಾಯಕ ಮುಹಮ್ಮದ್ ವಸೀಂ ಜೊತೆ 2ನೇ ವಿಕೆಟ್‌ಗೆ 107 ರನ್ ಸೇರಿಸಿದ್ದರು. ಮಧ್ಯಮ ಕ್ರಮಾಂಕದ ಮಯಾಂಕ್ ರಾಜೇಶ್ ಕುಮಾರ್ ಜನಿಸಿದ್ದು ಹರಿಯಾಣದಲ್ಲಿ. ವಿಕೆಟ್ ಕೀಪರ್ ಮತ್ತು ಆರಂಭಿಕ ಬ್ಯಾಟರ್ ಆರ್ಯಾಂಶ್ ಶರ್ಮಾ ಉತ್ತರ ಪ್ರದೇಶದ ಗಾಜಿಯಾಬಾದ್‌ನವರು. ಪಾರಂಪರಿಕ ಶೈಲಿಯ ಎಡಗೈ ಸ್ಪಿನ್ನರ್ ಹರ್ಷಿತ್ ಕೌಶಿಕ್ ಮತ್ತು ಆಲ್‌ರೌಂಡರ್ ಧ್ರುವ್ ಪರಾಶರ್ ಅವರಿಗೂ ಇದೆ, ಭಾರತದ ನಂಟು.

## ಭಾರತಕ್ಕಾಗಿ ಆಡಿದವರಿವರು

ಅಮೆರಿಕ ತಂಡದಲ್ಲಿರುವವರ ಪೈಕಿ ಹಲವರು ಭಾರತದಲ್ಲಿ ವಿವಿಧ ಹಂತಗಳಲ್ಲಿ ಕ್ರಿಕೆಟ್ ಆಡಿ ಅಲ್ಲಿಗೆ ತೆರಳಿದವರು. ತಂಡದ ನಾಯಕ ಮತ್ತು ಆರಂಭಿಕ ಬ್ಯಾಟರ್ ಮೊನಾಂಕ್ ಪಟೇಲ್ ಜನಿಸಿದ್ದು ಗುಜರಾತ್‌ನಲ್ಲಿ.

ಏಕೈಕ ಪ್ರಥಮ ದರ್ಜೆ ಪಂದ್ಯದಲ್ಲಿ ಮುಂಬೈ ತಂಡದಲ್ಲಿ ಕರ್ನಾಟಕದ ವಿರುದ್ಧ ಆಡಿದ್ದ ಎಡಗೈ ವೇಗಿ ಸೌರಭ್ ನೇತ್ರಾವಳ್ಕರ್ ಲಿಸ್ಟ್ ಎ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದು ಮುಂಬೈ ಪರವಾಗಿ, ಬರೋಡದ ವಿರುದ್ಧ. ನಂತರ ಅಮೆರಿಕ ತಂಡದಲ್ಲಿ ಸ್ಥಾನ ಪಡೆದ ಅವರು ಈಗ ಆ ತಂಡದ ಪ್ರಮುಖ ಬೌಲರ್‌ಗಳಲ್ಲಿ ಒಬ್ಬರು. ಹರ್ಮೀತ್ ಸಿಂಗ್ ಭಾರತ 19 ವರ್ಷದೊಳಗಿನವರ ತಂಡದಲ್ಲಿ ಆಡುವ ಮೊದಲು ಮುಂಬೈ ತಂಡದಲ್ಲಿದ್ದರು. ದೆಹಲಿ ಮತ್ತು ಸಿಕ್ಕಿಂ ತಂಡಗಳಲ್ಲಿದ್ದ ಮಿಲಿಂದ್ ಕುಮಾರ್ ಐಪಿಎಲ್‌ನಲ್ಲೂ ಆಡಿದ ಅನುಭವ ಹೊಂದಿದ್ದಾರೆ. ಸಂಜಯ್ ಕೃಷ್ಣಮೂರ್ತಿ ಭಾರತದಲ್ಲಿ 16 ವರ್ಷದೊಳಗಿನವರ ಕ್ರಿಕೆಟ್ ಆಡಿದವರು. ಪುಣೆಯಲ್ಲಿ ಜನಿಸಿದ ಶುಭಂ ರಂಜನೆ ಕೂಡ ಭಾರತದಲ್ಲಿ ದೇಶಿ ಕ್ರಿಕೆಟ್ ಆಡಿದ್ದಾರೆ. ■




ಅಮೆರಿಕ ತಂಡದ ನಾಯಕ ಮೊನಾಂಕ್ ಪಟೇಲ್

ಯುವರಾಜ್ ಸಿಂಗ್ ಸಮ್ರಾ

ಅಲಿಶಾನ್ ಶರಫು

ದಿಲ್‌ಪ್ರೀತ್ ಬಜ್ವಾ